# ದೇಹವಿದು ದೇವನಿರುವ ಗುಡಿ

ಡಿ.ಕೆ. ಈರೇಗೌಡ

ಈ ದೇಹವು ವಿಷಯ ಸುಖದ ಆಶಯವಲ್ಲ, ದೇವರ ದೇವಾಲಯ ಎಂಬ ಅಂಶವನ್ನು ಶ್ರೀ ಕುವೆಂಪು ಅವರ ಒಂದು ಪದ್ಯದ ಆಧಾರದ ಮೇಲೆ ವಿವರಿಸಿರುವ ಶ್ರೀ ಈರೇಗೌಡ ಅವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿವೃತ್ತ ಉಪ ನಿರ್ದೇಶಕರು.

ದೇಹವಿದು ದೇವನಿರುವ ಗುಡಿ. ಆದಿಯಿಂದಲೂ ಮಾನವ ಆನಂದದ ಅನ್ವೇಷಣೆಯಲ್ಲಿಯೇ ತೊಡಗಿದ್ದಾನೆ. ಅದಕ್ಕಾಗಿ ಏನೆಲ್ಲಾ ಪ್ರಯತ್ನ ಮಾಡಿದ್ದಾನೆ! ಒಂದಲ್ಲ ಒಂದು ರೀತಿಯಲ್ಲಿ ಜೀವ ಆನಂದ ಪಡೆಯುವುದಕ್ಕಾಗಿ ಹೇಗೆ ಪರಿತಪಿಸುತ್ತದೆ! ಇದಕ್ಕಾಗಿ ಜಗತ್ತಿನಲ್ಲಿರುವುದನ್ನೆಲ್ಲಾ ಪಡೆಯಬೇಕೆಂದು ಹಂಬಲಿಸುತ್ತದೆ. ಪಡಬಾರದ ಶ್ರಮ ಪಟ್ಟು ಮನಸ್ಸು ಏನನ್ನು ಬಯಸುತ್ತದೆಯೋ ಅದನ್ನು ಪಡೆಯುವುದೇ ಜೀವನದ ಗುರಿಯಾಗುತ್ತದೆ. ಮನೆ, ಮಠ, ಸಂಪತ್ತು, ಅಂತಸ್ತು, ಅಧಿಕಾರ, ಕೀರ್ತಿ— ಹೀಗೆ ಅದಕ್ಕೆ ಕೊನೆಯುಂಟೆ? ಒಂದೊಂದನ್ನು ಪಡೆದಾಗಲೂ ಏನು ಆನಂದ! ಏನು ಸಂಭ್ರಮ! ಏನು ಖುಷಿ! ಉದಾಹರಣೆಗೆ ಹೊಸಮನೆಯನ್ನು ಕಟ್ಟಿದಾಗ ವ್ಯಕ್ತಿಯ ಸಂಭ್ರಮ ನೋಡಿ! ಏನೊಂದು ಸಂಭ್ರಮ, ಎಷ್ಟೊಂದು ಸಡಗರ! ಆತನ ಓಡಾಟ ಒಡನಾಟ ನೋಡಿ! ಜೀವನ ಸಾರ್ಥಕವಾಯಿತೆಂದು ನಿಟ್ಟುಸಿರುಬಿಡುತ್ತಾನೆ. ಆದರೆ ದಿನ ಕಳೆದಂತೆ ಅದೇಕೋ ಬೇರೇನೊ ಬೇಕು ಅನಿಸುತ್ತದೆ. ಎಲ್ಲಿಯೋ ಏನೋ ಕೊರತೆ ಇದೆ ಅನಿಸುತ್ತದೆ.

**ನಮ್ಮಲ್ಲಿಲ್ಲದಿರುವುದರ ಬಗ್ಗೆ ಚಿಂತಿಸುವುದೆಂದರೆ ನಮ್ಮಲ್ಲಿ ಈಗ ಇರುವುದನ್ನು ವ್ಯರ್ಥಗೊಳಿಸಿದಂತೆ.**

ಹೀಗೆ ಪ್ರತಿಯೊಂದು ವಸ್ತುವನ್ನು ಪಡೆದಾಗಲೂ ಪಡೆದ ಸುಖ ಶಾಶ್ವತವಾಗಿ ನಿಲ್ಲುವುದಿಲ್ಲ. ಏನೆಲ್ಲ ಬುದ್ಧಿಮತ್ತೆಯನ್ನು ಬಳಸಿ ಜಗತ್ತಿನಲ್ಲಿ ಸಿಗಬಹುದಾದೆಲ್ಲವನ್ನು ಪಡೆದರೂ ಇನ್ನೂ ಏನೋ ಕೊರತೆ ಕಾಡುತ್ತದೆ. 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ' ತುಡಿಯುತ್ತದೆ ಜೀವ! ಸಿದ್ಧಾರ್ಥನಿಗೆ ಏನಿರಲಿಲ್ಲ? ಸಾರ್ವಭೌಮತ್ವ, ಸುಂದರ ಸತಿ, ನವಜಾತ ಶಿಶು, ಕಷ್ಟರಹಿತ ಬದುಕು, ಸ್ವರ್ಗಕ್ಕೆ ಕಿಚ್ಚಿಡುವ ಸುಖ! ಆದರೆ ಅದೇಕೋ ಅವನಿಗೆ ನೆಮ್ಮದಿ ಸಿಗಲಿಲ್ಲ. ಅರಮನೆಯಲ್ಲಿ ಸುಖವಿಲ್ಲವೆಂದು ತಿಳಿದ. ನಡುರಾತ್ರಿಯಲ್ಲಿ ಬದ್ಧನಾಗಿದ್ದ ಸಿದ್ಧಾರ್ಥ ಬುದ್ಧನಾಗಲು ಹೊರನಡೆದ! ಇದನ್ನರಿತೆ ನಮ್ಮ ಋಷಿಗಳು, ಸಂತರು, ತಪಸ್ವಿಗಳು, ದಾಸರು ಮನೆ-ಮಠ ತೊರೆದರು, ಶಾಶ್ವತ ಸುಖಾನ್ವೇಷಣೆಯಲ್ಲಿ ತೊಡಗಿದರು. ನಿಜದ ನೆಲೆಯಾದ ನಮ್ಮ ದೇಹದೇಗುಲದಲ್ಲಿ ನೆಲೆಸಿರುವ ಭಗವಂತನನ್ನು ಅರಿತಾಗಲೆ ಸಚ್ಚಿದಾನಂದವನ್ನು ಪಡೆಯಲು ಸಾಧ್ಯವೆಂಬ ರಹಸ್ಯವನ್ನು ತಿಳಿದು ಸಕಲ ಮನುಕುಲಕ್ಕೆ ಮಾರ್ಗದರ್ಶಕರಾದರು.

ಆದರೆ ನಮಗೆ? ಅಂಟಿರುವ ನಂಟಿನ ವಾಸನೆಯಿನ್ನೂ ಅಳಿದಿಲ್ಲ. ಆ ಶ್ರದ್ಧೆ ಆ ವೈರಾಗ್ಯ, ಆ ಜ್ಞಾನ ನಮಗುಂಟೆ? 'ಹಾಗಿದ್ದರೆ ನಮಗೆ ಮಾರ್ಗವೇನು?' ಮಾರ್ಗವುಂಟು. ಆದರೆ ಸ್ವಲ್ಪ ಮನಸ್ಸು ಮಾಡಬೇಕು. ಮನಸ್ಸು ಮಾಡಿದರೆ ಸಾಮಾನ್ಯನೂ ಅಸಾಮಾನ್ಯನಾಗಬಹುದು. ತಾನಿರುವ ನೆಲೆಯಿಂದಲೇ ಹಂತ ಹಂತವಾಗಿ 'ಅಂತ್ಯ'ವನ್ನೇರುವ ಬಗೆಯ ಕುರಿತು ಕವಿವಾಣಿಯೊಂದು ಹೀಗೆ ಮೊಳಗುತ್ತದೆ :

ದೇಹವಿದು ನೀನಿರುವ ಗುಡಿಯೆಂದು ತಿಳಿದು
ಗುಡಿಸುವೆನು ದಿನದಿನವು, ದೇವದೇವ;
ಬುದ್ಧಿಯಿದು ಗುಡಿಯೊಳುರಿಯುವ ದೀಪವೆಂದು
ಅಮಲ ಚಿಂತೆಯ ತೈಲವನು ತುಂಬುವೆ.

ಎದೆಯ ಕಮಲಾಕರದಿ ನೀನು ಮೀಯುವೆ ಎಂದು
ಕಂಬನಿಯ ನವಜಲದಿ ದಿನವು ತೊಳೆವೆ;
ಇರುಳು ಕವಿಯದ ತೆರದಿ ರವಿಯ ಬೆಳಕನು ಕರೆವೆ,
ಮನದ ಬಾಗಿಲ ತೆರೆವೆ; ಮುಚ್ಚದಿರುವೆ.

ಎನ್ನ ಕರ್ಮದ ಹಣ್ಣುಗಳ ಕೊಯ್ದು ತರುವೆ,
ಸುಖದುಃಖಗಳನೆಲ್ಲ ಆಯ್ದು ತರುವೆ;
ಕಣ್ಣು ಕಿವಿ ಮೂಗು ಬಾಯಿಂದ್ರಿಯಂಗಳು ದುಡಿದ
ಹೂವುಗಳ ಮಾಲೆಯನು ನೇಯ್ದು ಬರುವೆ.

ಗಂಟೆಗಳ ನಾ ಹೊಡೆಯೆ, ಶಂಖವನು ನಾನೂದೆ,
ಮಂಗಳಾರತಿಯ ನಾ ಬೆಳಗಲರಿಯೆ;
ನಿನ್ನ ಸಂಗವ ತೊರೆಯೆ, ನಿನ್ನನೆಂದೂ ಮರೆಯೆ,
ನಿನ್ನವನು ನಾನಲ್ಲವೇನೊ, ದೊರೆಯೆ! —ಕುವೆಂಪು

*This poor body is the temple of living God*— ಈ ದೇಹ ಬರಿಯ ದೇಹವಲ್ಲ. ಇದು ಭಗವಂತನ ವಾಸಸ್ಥಾನ. ಭಗವಂತ ಇಲ್ಲಿ ವಾಸ ಮಾಡಬೇಕಾದರೆ ಅದು ಶುದ್ಧವಾಗಿರಬೇಕು, ಸ್ವಚ್ಛವಾಗಿರಬೇಕು. ಅಲ್ಲಿರುವ ಕಲ್ಮಷಗಳನ್ನು ತೊಳೆಯಬೇಕು. ದಿನನಿತ್ಯದ ಈ ಬದುಕೆಂಬ ಮಾರುಕಟ್ಟೆಯಲ್ಲಿ ಕೊಳಕು ಮೈಮನಗಳನ್ನು ಮೆತ್ತಿಕೊಳ್ಳುತ್ತದೆ. ಅರಿಷಡ್ವರ್ಗಗಳನ್ನು ತೊಡೆದಲ್ಲದೆ, ಗುಡಿಸಿದಲ್ಲದೆ ಶುದ್ಧವಾಗದು. ಭಗವಂತ ಎದೆಯಂಗಳದಲ್ಲಿ ವಾಸಮಾಡಬೇಕಾದರೆ ಈ ಸ್ವಚ್ಛತಾ ಕಾರ್ಯ ನಿತ್ಯವೂ ನಡೆಯಬೇಕಾಗುತ್ತದೆ. ಬುದ್ಧಿಯು ಗುಡಿಯಲ್ಲಿ ಉರಿಯುವ ದೀಪ! ಅದಕ್ಕೆ ಚಿಂತನೆ ಎಂಬ ತೈಲವನ್ನು ನಿತ್ಯವೂ ತುಂಬಬೇಕು. ಆದರೆ ಅದೆಂತಹ ತೈಲ? 'ಅಮಲ ಚಿಂತೆ'ಆಗಿರಬೇಕು. 'ಮನಸ್ಸು ನಗರಸಭೆಯ ತೊಟ್ಟಿಯಿದ್ದಂತೆ. ಅಲ್ಲಿ ಏನೆಲ್ಲಾ ಒಗೆಯುತ್ತೇವೆ? ಯಾವುದು ಬ್ಯಾಡವೋ ಅದು. ಒಂದಷ್ಟು ಉಪಯೋಗಕ್ಕೆ ಬರುತ್ತದೆ ಎಂದಾದರೆ ಜತನದಿಂದ ಎತ್ತಿಡುತ್ತೇವೆ. ಹಾಗೆ ನಮ್ಮ ಮನಸ್ಸಿನಲ್ಲಿ ತುಂಬಿಕೊಳ್ಳುವ ವಿಷಯಗಳು ಕೆಲಸಕ್ಕೆ ಬಾರದವು. ಆದರೆ ಸ್ವಲ್ಪ ಮನಸ್ಸು ಮಾಡಿದರೆ, ಆ ಚಿಂತೆಗಳನ್ನು ಕಿತ್ತೊಗೆಯಬಹುದು. ಏಕೆಂದರೆ ಆ ತೊಟ್ಟಿಗೆ ತಳವಿಲ್ಲ.' (ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಜ್ಞಾನಯೋಗಾಶ್ರಮ, ಬಿಜಾಪುರ —ಒಂದು ಉಪನ್ಯಾಸದಿಂದ). ಭಗವಾನ್ ಶ್ರೀರಾಮಕೃಷ್ಣರು ಹೇಳುತ್ತಾರೆ :

'ಭಗವತ್ ಸಾಕ್ಷಾತ್ಕಾರವೇ ಜೀವನದ ಉದ್ದೇಶ... ಆದರೆ ನಮ್ಮ ಮನಸ್ಸಿನಲ್ಲಿ ತುಂಬಿಕೊಳ್ಳುವ ಚಿಂತನೆಗಳೆಂಥವು! ಭಗವಂತನನ್ನು ಬಿಟ್ಟು ಉಳಿದೆಲ್ಲವನ್ನೂ ತುಂಬಿಕೊಳ್ಳುತ್ತೇವೆ. ನಮ್ಮ ಮನ ಕಸದ ತೊಟ್ಟಿಯಾದರೆ ಅಲ್ಲಿ ಭಗವಂತ ವಾಸಿಸುವುದೆಂತು?' ಅಲ್ಲಿಗೆ 'ಅಮಲಚಿಂತೆ'ಯ ತೈಲವನ್ನು ತುಂಬಬೇಕು. ಅಮಲಚಿಂತೆಯ ತೈಲದಿಂದ ಉರಿಯುವ ಜ್ಯೋತಿ ಜಗಜ್ಯೋತಿಯಾಗಿ ಬೆಳಕು ಚೆಲ್ಲುತ್ತದೆ, ಕತ್ತಲೆಯಲ್ಲಿರುವ ಜೀವಕ್ಕೆ.

**ಎದೆಯ ಕಮಲಾಕರದಿ ನೀನು ಮೀಯುವೆ ಎಂದು**
**ಕಂಬನಿಯ ನವಜಲದಿ ದಿನವು ತೊಳೆವೆ.**

ರಾಮಕೃಷ್ಣರು ಹೇಳುತ್ತಾರೆ, 'ಭಗವಂತನಿಗಾಗಿ ಏಕಾಂತದಲ್ಲಿ ಕುಳಿತು ಕಣ್ಣೀರು ಸುರಿಸಬೇಕು. ಹೆಂಡತಿ ಮಕ್ಕಳಿಗಾಗಿ ಕೊಡಗಟ್ಟಲೆ ಕಣ್ಣೀರು ಸುರಿಸುತ್ತಾರೆ. ಆದರೆ ಭಗವಂತನಿಗಾಗಿ ಕಣ್ಣೀರು ಸುರಿಸುವವರು ಯಾರು?'.... ಭಗವಂತನ ಒಲವು ಗಳಿಸಬೇಕಾದರೆ ಅಂತಃಕರಣಪೂರ್ವಕವಾಗಿ ಶ್ರದ್ಧೆಯಿಂದ ಕರೆಯಬೇಕು. ಶ್ರದ್ಧೆ ಮೊಳೆಯಬೇಕಾದರೆ ಎದೆಯಂಗಳ ಶುದ್ಧವಾಗಿರಬೇಕು. ಆ ಶುಚಿತ್ವ ದಿನವೂ ನಡೆಯುತ್ತಿರಬೇಕು. ಏಕೆಂದರೆ ಜಗದ ಸಂತೆಯಲ್ಲಿ ಮುಳುಗಿರುವ ನಮ್ಮ ಮೇಲೆ ಅರಿಷಡ್ವರ್ಗಗಳು ನಿತ್ಯವೂ ಧಾಳಿ ಮಾಡುತ್ತಿರುತ್ತವೆ. ಅವು ಮುತ್ತದಂತೆ ನಿತ್ಯವೂ ಎಚ್ಚರಿದ್ದು ತೊಳೆಯಬೇಕು. ಶ್ರೀರಾಮಕೃಷ್ಣರು ಹೇಳುವಂತೆ ಪಾತ್ರೆಯನ್ನು ತೊಳೆಯುತ್ತಿರಬೇಕು. ಇಲ್ಲವಾದಲ್ಲಿ 'ಕಿಲುಬು' ಹಿಡಿಯುತ್ತದೆ. ಜೊತೆಗೆ ಅಜ್ಞಾನದ ಕತ್ತಲು ನಮ್ಮನ್ನು ಸುತ್ತದಂತೆ ಸುಜ್ಞಾನದ ಬೆಳಕಿಗಾಗಿ ನಮ್ಮ ಮನದ ಬಾಗಿಲನ್ನು ತೆರೆದಿರಬೇಕು—ಎಚ್ಚರಿರಬೇಕು, ಎಲ್ಲೂ ಜಡತ್ವಕ್ಕೆ ಎಡೆಯಿರಬಾರದು.

ದಿನನಿತ್ಯವೂ ನಾವು ಮಾಡುವ ಕರ್ಮಗಳೆಲ್ಲವೂ ಭಗವಂತನಿಗೆ ಅರ್ಪಿತವಾಗಬೇಕು. ಹಾಗೆ ಅರ್ಪಿತವಾಗಬೇಕಾದರೆ ನಾವು ಮಾಡುವ ಕೆಲಸಗಳು ಪವಿತ್ರವಾಗಿರಬೇಕು. ನಾನು ಭಗವಂತನ ಪ್ರತಿನಿಧಿ, ಅವನಿಚ್ಛೆಯಂತೆ ನನ್ನ ಜೀವನಯಾತ್ರೆ ಸಾಗುತ್ತಿದೆ ಎಂದು ಪ್ರತಿಯೊಬ್ಬನೂ ಭಾವಿಸಿದ್ದೇ ಆದರೆ ಈ ನಮ್ಮ ಸಮಾಜ ಹೇಗಿರುತ್ತದೆ! ಈ ಭಾವನೆ ಮನೆಮಾಡಿದರೆ, ವ್ಯಾಪಾರಿ ಕಲಬೆರಕೆ ಮಾಡುತ್ತಾನೆಯೆ? ಅಧಿಕಾರಿ ಲಂಚ ಪಡೆಯುತ್ತಾನೆಯೆ? ನಮ್ಮ ಬದುಕಿನ ಸುತ್ತ ಸುತ್ತಿಕೊಂಡಿರುವ ಕೊಲೆ, ದರೋಡೆ, ಅನಾಚಾರ, ವಂಚನೆ, ಮೋಸ ಇತ್ಯಾದಿ ಇತ್ಯಾದಿ ಕೋಟಿಕೋಟಿ ಕರ್ಮಾಚಾರಗಳಿಗೆ ಎಡೆಯುಂಟೆ? ಆಗ ಮರ್ತ್ಯ ಅಮರ್ತ್ಯ ಆಗುವುದಿಲ್ಲವೇ? **'ಸ್ವರ್ಗ ನರಕವೆಂಬುದು ಬೇರಿಲ್ಲ ಕಾಣಿರೋ'** ಎಂಬ ಬಸವಣ್ಣನವರ ಮಾತು ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿ ಉಳಿಯುವುದಿಲ್ಲವೆ? ಹಾಗಾಗಬೇಕಾದರೆ ನಮ್ಮ ಕಣ್ಣುಗಳು ಒಳ್ಳೆಯದನ್ನೇ ನೋಡಬೇಕು, ಕಿವಿ ಒಳ್ಳೆಯದನ್ನೇ ಕೇಳಬೇಕು, ಬಾಯಿ ಒಳ್ಳೆಯದನ್ನೆ ನುಡಿಯಬೇಕು. ಮನಸ್ಸು 'ನಿತ್ಯವನ್ನೇ' ನಿತ್ಯವೂ ಚಿಂತಿಸಬೇಕು. ಆಗ ನಾವು ಮಾಡುವ ಕೆಲಸಗಳೇ 'ಹೂಬಲೆ'ಯಾಗಿ ಭಗವಂತನನ್ನು ಬಂಧಿಸುತ್ತವೆ— ಭಗವಂತ ಭಕ್ತಾಧೀನನಲ್ಲವೇ? ಶ್ರೀಕುವೆಂಪು ಅವರೇ ಬೇರೊಂದೆಡೆಯಲ್ಲಿ ಹೇಳಿರುವಂತೆ **'ಮಗುವಿಗಭಿಷೇಕವನು ಮಾಡಿಸಲು ಹರನಿಗಭಿಷೇಕ'** ಎಂಬುದು ಎದೆಯೊಳಗೆ ನೆಲೆಗೊಳ್ಳಬೇಕು. ಆಗ **'ತಪಕೊಲ್ಲದುದು ತಾಯ್ತನಕೆ'** ಸಲ್ಲುತ್ತದೆ.

ಆದರೆ ಇಷ್ಟೆಲ್ಲಾ ಆದರೆ ಕಟ್ಟಕಡೆಯದೊಂದಿದೆ. ಅದನ್ನು ದಾಟುವುದು ಬಲು ಕಠಿಣ. ಎಂಥೆಂಥ ಸಾಧಕರೂ 'ನಾ' ಎಂಬ ಸಂಕೋಲೆಯನ್ನು ದಾಟಲಾರದೆ ಒದ್ದಾಡುತ್ತಿದ್ದಾರೆ. 'ನಾ' ಎಂಬುಹುದು ಹುಟ್ಟಿಯೆ 'ನಾನಿಲ್ಲಿಗೆ' ಹುಟ್ಟಿಬಂದಿರುವಾಗ 'ನಾನು' ಬಿಟ್ಟುಹೋಗುವುದೆ? ರಾಮಕೃಷ್ಣರು ಹೇಳುತ್ತಾರೆ : **'ಸಾಸಿವೆ ಕಾಳಿನಷ್ಟು ಅಹಂ ಇದ್ದರೂ ಮುಕ್ತಿ ದೊರೆಯದು.'** ಆದರೆ ನಮ್ಮಲ್ಲಿರುವ 'ಅಹಂ' ಎಷ್ಟು? ಸಾಸಿವೆ ಕಾಳಿನಷ್ಟು ಕೆಲಸ ಮಾಡಿದರೆ ಸಾಗರದಷ್ಟು 'ನಾನು' ತುಂಬಿಕೊಂಡಿರುತ್ತದೆ. 'ನಾನು' ಅಳಿಯಲೇಬೇಕು. 'ನಾನು' ಎಂಬ ಅಹಂಕಾರವನ್ನು ಪೂರ್ಣಶೂನ್ಯತೆಗೆ ಅದ್ದದಿದ್ದರೆ ಪರಿಪೂರ್ಣತೆ ಸಾಧ್ಯವಿಲ್ಲ. ಈ ಅಹಂಕಾರದ ಅಳಿವಿನ ಚಿಹ್ನೆಯಾಗಿಯೆ ಕವಿ ಹೇಳುತ್ತಾನೆ, 'ಗಂಟೆಗಳನ್ನು ಹೊಡೆಯುವುದಿಲ್ಲ, ಶಂಖವನ್ನೂ ಊದುವುದಿಲ್ಲ' ಎಂದು. ಗಂಟೆ ಹೊಡೆಯುವುದು, ಶಂಖ ಊದುವುದು ಎಂದರೆ 'ನಾನು'ವಿನ ಆರ್ಭಟ. 'ಮಂಗಳಾರತಿ'ಯ ಬೆಳಗುವ ಬೆಡಗು ನನಗಿಲ್ಲವಯ್ಯ ತಂದೆ—ಎಂದು ತೀವ್ರ ನಮ್ರತೆಯನ್ನು ಕವಿ ವ್ಯಕ್ತಪಡಿಸಿದ್ದಾರೆ.ಭಕ್ತನೆಂದಿಗೂ ಸೋಲುವುದಿಲ್ಲ:

**ನಿನ್ನನೆಂದೂ ತೊರೆಯೆ, ನಿನ್ನನೆಂದೂ ಮರೆಯೆ**
**ನಿನ್ನವನು ನಾನಲ್ಲವೇನೊ, ದೊರೆಯೆ!**

ನಿನ್ನನೆಂದಿಗೂ ಮರೆಯೆ, ನಿನ್ನನೆಂದಿಗೂ ತೊರೆಯೆ ಎಂಬ ಸಾತ್ವಿಕ ಛಲವಿದೆ. 'ಛಲ ಬೇಕು ಭಕ್ತಂಗೆ ಛಲ ಬೇಕು'. ಇಂತಹ ಛಲದ ಭಕ್ತನನ್ನು 'ಕೊರೆದು ನೋಡುವ, ಕೊಯ್ದು ನೋಡುವ'— ಯಾವುದಕ್ಕೂ ಜಗ್ಗದಿದ್ದರೆ—ಶಿವ ಕೊನೆಗೆ ತನ್ನಂತೆ ಮಾಡುವ!

ನಮ್ಮ ದೈನಂದಿನ ಕ್ರಿಯೆಗಳೆಲ್ಲವನ್ನು ಮಾಡುತ್ತಾ ಅವೆಲ್ಲವೂ ಭಗವಂತನಿಗೆ ಅರ್ಪಿತವೆಂದು, ದೇಹವೇ ದೇಗುಲವೆಂದು ತಿಳಿದು ಬದುಕಿದರೆ—ನಮ್ಮ ಬದುಕು ಹೇಗಿರುತ್ತದೆ? ನಮ್ಮ ದೈನಂದಿನ ಜೀವನದಲ್ಲೇ, ಅದರ ಜತೆಯಲ್ಲೇ ಆತ್ಮ ನಿರೀಕ್ಷಣೆ, ಆತ್ಮದ ಅರಿವು ಮಾಡಿಕೊಂಡಾಗ ಜೀವನವೇ ಸಂಗೀತ—ನೃತ್ಯವಾಗುತ್ತದೆ.

---

*ಜಪವೇಕೆ ? ತಪವೇಕೆ ? ಪೂಜೆ ಧ್ಯಾನಗಳೇಕೆ ?*
*ವೇದ ಉಪನಿಷತ್ತುಗಳೇಕೆ ? ವಚನ ಸದ್ಗ್ರಂಥಗಳ ಪಠಣವೇಕೆ ?*
*'ನಾ' ಅಳಿದು 'ನೀ' ಉಳಿದು ಆನಂದದ ತೆರೆಗಳುಕ್ಕಿ ಬರುತಿರಲು,*
*ನಿನ್ನ ಅನಂತ ಮೌನಗರ್ಭದಲಿ, ನಾನು ಮೌನವಾಗಲಿಕ್ಕೆ*

ಅಪರ್ಣ, ಮೈಸೂರು